ಸಾಕ್ಷಿಯನ್ನು ದಿನಾಂಕ 19.04.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಾದಿ ಪರ ವಕೀಲರಾದ ಶ್ರೀ ಹೆಚ್.ವಿ.ಆರ್. ವಕೀಲರಿಂದಃ**

ನಾನು ಈ ದಾವೆಯ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳು ಸತ್ಯವಾಗಿರುತ್ತದೆ ಮತ್ತು ಅದಕ್ಕೆ ನಾನು ನನ್ನ ಸಹಿ ಹಾಕಿರುತ್ತೇನೆ.

ದಿಃ 07.10.2020 ರ ಸ್ವಾಧೀನ ರಹಿತ ಕ್ರಯದ ಒಪ್ಪಂದದ ಕರಾರು ಪತ್ರವನ್ನು ಹಾಜರು ಮಾಡಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

ನಿಪಿ-1 ನ್ನು ಪ್ರತಿವಾದಿಯರು ಬರೆದುಕೊಟ್ಟಿರುತ್ತಾರೆ. ಸಾಕ್ಷಿಯು ನಿಪಿ-1 ರಲ್ಲಿರುವ ಪ್ರತಿವಾದಿಯರ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-1(ಎ), 1(ಬಿ) ಮತ್ತು 1(ಸಿ) ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ಸಾಕ್ಷಿದಾರರಾಗಿ ಗುರುಸ್ವಾಮಪ್ಪ, ರಂಗನಾಯಕ ಮತ್ತು ರಾಜಶೇಖರ್ ರವರು ಸಹಿ ಮಾಡಿರುತ್ತಾರೆ. ಸದರಿಯವರ ಸಹಿಗಳನ್ನು ಸಾಕ್ಷಿನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1(ಡಿ), ನಿಪಿ-1(ಇ) ಮತ್ತು ನಿಪಿ-1(ಎಫ್) ಎಂದು ಗುರುತಿಸಲಾಯಿತು. ನಿಪಿ-1 ನ್ನು ಶ್ರೀ ಹೆಚ್.ವಿ.ರವಿಕಾಂತ್, ವಕೀಲರು ತಯಾರಿಸಿರುತ್ತಾರೆ. ಸದರಿಯವರ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಜಿ) ಎಂದು ಗುರುತಿಸಲಾಯಿತು.

ದಿಃ 06.04.2021 ರ ಕ್ರಯದ ಕರಾರು ಬಾಬ್ತು ಹೆಚ್ಚುವರಿ ಕಾಲಾವಕಾಶ ಪಡೆಯುವ ಪತ್ರವನ್ನು ಹಾಜರು ಮಾಡಿದ್ದು, ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಸದರಿ ಪತ್ರವನ್ನು ಪ್ರತಿವಾದಿಯರು ಬರೆದುಕೊಟ್ಟಿರುತ್ತಾರೆ. ಸಾಕ್ಷಿಯು ನಿಪಿ-2 ರಲ್ಲಿರುವ ಪ್ರತಿವಾದಿಯರ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-2(ಎ), 2(ಬಿ) ಮತ್ತು 2(ಸಿ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ಸಾಕ್ಷಿದಾರರಾಗಿ ರಾಜಶೇಖರ್ ಮತ್ತು ರಂಗನಾಯಕ ರವರು ಸಹಿ ಮಾಡಿರುತ್ತಾರೆ. ಸದರಿಯವರ ಸಹಿಗಳನ್ನು ಸಾಕ್ಷಿನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-2(ಡಿ) ಮತ್ತು ನಿಪಿ-2(ಇ) ಎಂದು ಗುರುತಿಸಲಾಯಿತು. ನಿಪಿ-2 ನ್ನು ಶ್ರೀ ಹೆಚ್.ವಿ.ರವಿಕಾಂತ್, ವಕೀಲರು ತಯಾರಿಸಿರುತ್ತಾರೆ. ಸದರಿಯವರ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಎಫ್) ಎಂದು ಗುರುತಿಸಲಾಯಿತು.

ದಿಃ 16.09.2021 ರ ನೋಟೀಸ್ ನ ಕಛೇರಿ ಪ್ರತಿಯನ್ನು ಹಾಜರು ಮಾಡಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

PW-1

ಮೂರು ಅಂಚೆ ಸ್ವೀಕೃತಿ ಪತ್ರಗಳನ್ನು ಹಾಜರು ಮಾಡಿದ್ದು, ಅವುಗಳನ್ನು ಕ್ರಮವಾಗಿ ನಿಪಿ-4 ರಿಂದ ನಿಪಿ-6 ಎಂದು ಗುರುತಿಸಲಾಯಿತು.

ಸೀಗೆವಾಡಿ ಗ್ರಾಮದ ಸರ್ವೆ ನಂ. 7/1 ರ ಪಹಣಿ ಪತ್ರಿಕೆಯನ್ನು ಹಾಜರು ಮಾಡಿದ್ದು, ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗಾಗಿ ವಕೀಲರು ಸಮಯ ಕೋರಲಾಗಿ, ಅನುಮತಿ ನೀಡಲಾಯಿತು.**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್

ಗುಂಡ್ಲುಪೇಟೆ